remarked that ಇಲ್ಲದ, like ಉಳ್ಳ, may govern also the accusative, *e.g.* ವಿಭಕ್ತಿಯನಿಲ್ಲದುದು (see § 316 under No. 1).

ಅಲ್ಲದೆ (*cf.* § 300, 1, remark *a*).

ಅಲ್ಲದೆ when considered as an adverb (§ 212, 7) means **'excepting'**, **'except'** (vinârthaṁ, Šabdânušâsana), and occasionally **'but'**, *e.g.* ಜಿನನ್ ಅಲ್ಲದೆ ದೇವರ್ ಒಳರೇ, are (there any) gods except Jina? ನೀನ್ ಅಲ್ಲದಾವನ್ ಅಧಿಕನ್ ಇಳೆಯೊಳ್ ಜಿನಪಾ, except thee, Jinapa, who is an excellent person on earth? ಖದ್ಯೋತಂಗಳ್ಗಿರುಳಲ್ಲದರ್ಕನಮ್ ಇದಿರೊಳ್ ಮೆಯ್ವೋರ್ಕೆಯೇನ್ ಅರ್ಕುನವೊ, except at night fire-flies (have not the ability to shine); let the sun shine in front, what ability (to shine) have they? ಕುಸುಮಾಯುಧ, ನಿನ್ನ ಬಲ್ಪು ಪೆಣ್ಮಕ್ಕಳೊಳ್ ಅಲ್ಲದಿಲ್ಲ, Kâma, except among females, thou hast no power. ಕುಳದ ನಿಯಾಮದೊಳ್ ಎನ್ದುಂ ಕ್ಷಳಕ್ಕೆ ಱಾಕ್ಷರವಿಕಲ್ಪಮ್ ಇಲ್ಲ; ವಿಕಲ್ಪಂ ಕ್ಷಳನ್ ಅಲ್ಲದಿಲ್ಲ, in an alliteration wherein the kuḷa (the Kannaḍa ೞ್) is, the optional use of the letter ಱ್ for the kshaḷa (the Saṁskṛita ಳ್) does never occur; an optional use, excepting (that of) the kshaḷa, is not to occur (in such a case). ಉಯ್ ನೆಯ್ ಸುಯ್ ಒಯ್ ಧಾತುಗಳೊಳ್ ದ್ವಿತ್ವಮ್ ಅಲ್ಲದಿಲ್ಲ ವಿಕಲ್ಪಂ, in the verbal themes uy nĕy suy ŏy (there) is no other use except the doubling (of their final letter when ಅಲ್ is suffixed). ಅಕಾರಾನ್ತಮ್ ಅಲ್ಲದುೞಿದ ಸ್ವರವ್ಯಂಜನಾನ್ತಂಗಳ್ಗೆ ಪರಮಾದ ಚತುರ್ಥಿಗೆ ಗೆಯೆನ್ದಕ್ಕುಂ, excepting the terms that end in ಅ, (there) is (the suffix) ಗೆ for the dative when it (*i. e.* its suffix) follows the rest (*viz.*) those that end in (other) vowels and in consonants. ಧನವನ್ ಈಯಲು ಬರ್ಪುದಲ್ಲದೆ ತನುವನ್ ಈಯಲ್ ಅದೆನ್ತು ಬರ್ಪುದು, it is possible to offer (one's) riches, but how will it be possible to offer (one's) body? ಆದಿಶಿವಭಕ್ತಂಗೆ ಮದುವೆಯನ್ ಆದರದಿ ನಾ ಮಾಡಿಪ್ಪೆನ್ ಅಲ್ಲದೇ ದುಹಿತೆಯಂ ಭವಿಗೆ ಕೊಡೆಂ, except I reverently marry (her) to a devotee of Âdišiva, I do not give this (my) daughter to a worldling. ದೇವರ ಕೃಪೆಯಿನ್ದಲ್ಲದೆ ಪಾಪಕ್ಕೆ ಪರಿಹಾರವಿಲ್ಲ, except through the grace of God (there) is no forgiveness for (*i. e.* of) sin. ಹಾಲು ಮೊಸರಾಗುವದಲ್ಲದೆ ಮೊಸರು ಹಾಲಾದೀತೇ, except that milk becomes curds, could curds become milk?

Occasionally ಒಡೆ or ಅಡೆ (or ಅರೆ) **may precede** ಅಲ್ಲದೆ, *e.g.* ನಿಮ್ಮ ಕೆಯ್ಯಲಿ ಮಡಿದೊಡಲ್ಲದೆಯೆಮ್ಮ ಶಾಪವಿಮೋಕ್ಷವಾಗದು, except he die by your hand, I shall get no deliverance from my curse. ಎಮ್ಮುವಂ ಪೂಜಿಸಿದಡಲ್ಲದೆ ಭಕ್ತಿ ದೊರೆಯದು, except one adores me, devotion will not be obtained.

ಅಲ್ಲದೆ sometimes loses so much of its originally verbal character that it is added to **a relative past participle** (unless the rule in § 167 be

applied), *e.g.* ನಿನ್ನಂ ನೋಡಿದಲ್ಲದೆ (=ನೋಡಿದ ಅಲ್ಲದೆ, or perhaps ನೋಡಿದು ಅಲ್ಲದೆ), except I see thee. ಬೆಳಗಿದಲ್ಲದೆ, except it become bright. ಶತ್ರ್ವಂತಂ ಸಂಸ್ಕೃತದೊಳ್ ಪದವಿಧಿಯಂ ನೆಱೆ ತಳೆದಲ್ಲದೆ (Commentary: ಧರಿಸಿದಲ್ಲದೆ) ಕನ್ನಡದಲ್ಲಿ ಲಿಂಗವಾಗದು ನಿಜದಿಂ, a term with final ಅತ್ may well form a word in a Saṁskṛita compound, but in (true) Kannaḍa does not become a nominal theme by itself. ಊರಿಗೆ ಬನ್ದ ಮಾರಿ ಉಣ್ಡಲ್ಲದೇ ಹೋಗದು, Mâri that has come to a town, does never go away except she eats.—On the other hand we have also: ತಲೆ ತಾಗಿಸಿದ್ದಲ್ಲದೆ (=ತಾಗಿಸಿದ್ದು ಅಲ್ಲದೆ) ಬುದ್ಧಿ ಬಾರದು, except he knock (his) head (against something), understanding will not be obtained (by him).

Likewise this disappearance of its original character seems to occur when **ಅಲ್ಲದೆ** is followed by an accusative (see § 300, 1, remark *b*), *e. g.* ಮೃಡನ ಭಕ್ತರನ್ ಅಲ್ಲದಾರುವನ್ ಅಱಿಯೆವರ್ತಿಸೆವು, except devotees of Śiva we know and love nobody. ಎನ್ನನ್ ಅಲ್ಲದೆ ಸತತಂ, ಬಱಿಕೆನ್ನ ಪದವಿಯನ್ ಆದೊಡಾತಂ (see § 287, remark) ತನ್ನ ಮನದೊಳು ನೆನೆವುದಿಲ್ಲ, except always upon me, he does not think even upon my (high) rank.

ಅಲ್ಲದೆ may also get the meaning of 'besides' (ಮೇಣ್, ಮತ್ತೆ), *e. g.* ಅದಲ್ಲದೆ, besides that. ಇದಲ್ಲದೆ, besides this. ಅವನಲ್ಲದೆ ಮತ್ತೆ ಕೆಲವರು ಬನ್ದರು, besides him some others came. ನೊಣಗಳು ಸೊಗಸಿನ್ದ ಹಾಱಾಡುತ್ತ ಹೊತ್ತುಗಳೆಯುತ್ತಿದ್ದವಲ್ಲದೆ ತಮ್ಮ ಹಿತದ ಕೆಲಸವನ್ನೇನೂ ಮಾಡಿ ಕೊಳ್ಳುತ್ತಿದ್ದಿಲ್ಲ, the flies spent (their) time by joyfully flying about, besides (that) they did not do any work useful to themselves. ದೇವರಾಜನು ದಕ್ಷಿಣಕ್ಕೆ ತನ್ನ ರಾಜ್ಯವನ್ನು ಬೆಳಿಸಿದ್ದಲ್ಲದೆ ಉತ್ತರದಲ್ಲಿ ವಿಜಾಪುರದವರ ಹೊಸಕೋಟೆಯ ಪರಗಣೆಯನ್ನು ತಕ್ಕೊಣ್ಡನು, Dêvarâja, besides enlarging his kingdom much towards the south, took, in the north, the district of Hŏsakôṭĕ of the Vijâpura people. ಅವನು ಹಣಗಾಱನಲ್ಲದೆ ಧರ್ಮಿಷ್ಠನಾಗಿದ್ದಾನೆ, besides a rich man he is a very liberal man.

The original verbal character of ಅಲ್ಲದೆ as a gerund (*cf.* § 300) appears still in the following instances:—ಸ್ಥಿರಮ್ ಅಲ್ಲದೆ ಸ್ನೇಹ ಮಾಱ್ಪವನು, a man who, (his love) not being steady, loves (*i. e.* a man unsteady in his affection). ಮಾಮರನ್ ಅಲ್ಲದಿಲ್ಲ, a mango tree not being it is not (*i. e.* it certainly is a mango tree). ತನಿಗಮ್ಪಿನ ಮಲ್ಲಿಗೆಯಲ್ಲದಿಲ್ಲ, a jasmine of rich fragrance not being it is not (*i. e.* it certainly is a jasmine of rich fragrance). ಪ್ರಯತ್ನಮಲ್ಲದಿರ್ಪ ಗುರುತ್ವದೊಳ್, in respectability that requires no (particular) effort (to acknowledge).

The relative participle of ಅಲ್ಲದೆ is ಅಲ್ಲದ, *e. g.* ಅದಲ್ಲದೊಡೆ, if it be not that (or thus). ಅಲ್ಲದುದು, that is improper. ತಾನ್ ಅಲ್ಲದನ್ಯಂ, another

who is not he. ಸ್ಪಷ್ಟಮಲ್ಲದ ನುಡಿ, speech that is not distinct. ಅಲ್ಲದ ಕಾರ್ಯಂಗಳ್, acts that are not proper. ಬಿನ್ದುವಿಂಗೆ ಬನ್ದುದಲ್ಲದ ನಿಜವಹನ್ಥ ಮಕಾರಂ, such an ಮ್ as does not stand for the bindu. ಪ್ರತಿಷೇಧಮ್ ಅಲ್ಲದಲ್ಲಿಯುಂ, also where there is no negative sense.

ಅಲ್ತು.

In § 212, 7 ಅಲ್ತು is classed with the adverbs that are verbal forms; it is a bhâvavačana of the verb ಅಲ್ and another form of ಅಲ್ಲದುದು. It is used, like ಅಲ್ಲ (which see in § 300), in pratishêdha, negativing, etc., *e. g.* ಬರೆಪವೊಬ್ಬಕ್ಕೆ ಉಚ್ಚರಿಸಲ್ ಬಾರದುವು ಅಕ್ಕರವ್ ಅಲ್ತು, (sounds) that are written (but) cannot be read (except in an inarticulate manner, as sounds for thunder, etc.), are no letters (lit. letters a being not). ಅವನಲ್ತು, not he! ಅವಳಲ್ತು, not she! ಅದಲ್ತು, not that! ತಕ್ಕದಲ್ತು, it is not fit. ಮುಳಿಸಲ್ತೆಮಗಾತನೊಳ್, we have no (such a thing as can be called) anger against him. ದೇವಾ, ಸಿಂಹಳೇನ್ದ್ರನ್ ಎನ್ದುಂ ಕಪ್ಪಮ್ ಇತ್ತನ್ ಅಲ್ತು, O king, Siṁhaḷêndra is one who has never paid tribute.

ಅಲ್ತೆ, *i. e.* ಅಲ್ತು to which the ಎ of inferential interrogation (§ 212, 6) is suffixed, is used as follows:—ಎಲೇ, ಇದಲ್ತೆ ತುಹಿನಕ್ಷ್ಮೋಣೀಧ್ರದುತ್ತುಂಗಸಾನುಗಳೊಳ್ ಭೋರನೆ ಬನ್ದು ಪಾಯ್ದುದು ನೋಡಾಕಾಶಗಂಗಾಜಲಂ, O look, is not this the water of the celestial Ganges that runs swiftly down on the table-lands of the snowy mountain? ಪೊನ್ನಿಂ ಸಮನಿಸುಗುವ್ ಅಲ್ತೆ ಹೆಣ್ಣುಂ ಮಣ್ಣುಂ, are not women and lands acquired by means of gold? (*Cf.* ಅಲ್ಲವೆ § 300, 3).

XXIV. On the repetition of verbs, and on the combination of certain verbs.

339. The repetition of nouns, pronouns, adjectives, numerals, adverbs, interjections and imitative sounds has been treated of in §§ 303—309.

In § 152 it has been stated that there are no true frequentative or iterative verbs in Kannaḍa, but that a kind of iterative verbs may be formed by simple repetition (yugaḷôččaraṇa, dviḥprayôga) or triple repetition (triprayôga).

Instances of such iterative verbs elucidating their forms are given in § 165, *b*, 1—4, where short participles are concerned, and in § 211, 1—11, where all the various repetitions are given, but without the respective various meanings conveyed by them. (*Cf.* § 361.)

In the present paragraph the meanings are adduced. They are the following:—

1, directing the attention of others to a distant object or affair (dûra, Šabdamaṇidarpaṇa), *e. g.* ಆ ತೋರ್ಪುದಾ ತೋರ್ಪುದು ಬಾನೊಳ್ ಧ್ವಜಪಟಂ, there in the sky (lit. in that — that sky) appears, appears the banner!

2, directing the attention of others to a near object or affair (samîpa, Šmd.), *e. g.* ಇದೆ ಇದೆ ಸಾರ್ಕೆ ಸಾರ್ಕೆ ಗಣಕಾವಳಿ ಪೇಳ್ದ ಮುಹೂರ್ತಂ, lo, lo! let (them) approach, let (them) approach! (it is) the time told by the assemblage of astrologers.

3, repeatedly directing one's own face or attention towards an object or affair (abhîkshaṇa, abhîkshṇa, pratimukhâvalôkana, Šmd.), a person's own repetition of action or experiencing (abhîkshaṇya, Šabdânušâsana), *e. g.*

ಗಿಳಿಯೊಡನೋದಿಯೋದಿ ನುಡಿಗಲ್ತು, ಮದಾಲಸರಾಜಹಂಸಮ
ಣ್ಡಳಿಯೊಡನಾಡಿಯಾಡಿ ನಡೆಗಲ್ತು, ಕಲಾಪಿಗಳಾಟಮಂ ಮನಂ ।
ಗೊಳೆ ನಡೆ ನೋಡಿ ನೋಡಿ ಕುಣಿಯಲ್ ನೆಱೆ ಕಲ್ತು, ಕಲಾಗುಣಂ ಪೊದ
ಳ್ದಿಳವಡೆ ಬಾಲಭಾವದೊಳೆ ಭಾವಕಿಯರ್ ಬಳೆವರ್ ನಿರನ್ತರಂ ॥ having

read and read (*i. e.* having repeatedly read) with parrots and (thus) learned speech, having played and played with the assemblage of flamingoes languid with passion and (thus) learned walking, having inquisitively and carefully seen and seen the dance of peacocks and (thus) having learned to dance well, the females with (their innate) taste for the beautiful continually grew up to the development of the excellence of fine arts (Šmd.). — ಅಟ್ಟಟ್ಟಿೞಿಪಿದಂ, he lowered (the pot) after continual boiling (its contents). ಉಣ್ಡುಣ್ಡು ಪೋದಂ, he repeatedly ate and (then) went. ನೋಡಿ ನೋಡಿ ನಕ್ಕಂ, he looked on and looked on and (then) laughed (Šabdânušâsana). ಉಸಿಕನಿದ್ದಿದ್ದೇಂ ಕಾರಣಂ, he was and was (*i. e.* continued to be) silent; what (is) the cause? (Basavapurâṇa). ಓದೋದಿ ಬೇಸತ್ತನು, he read and read, and became tired. ಆಡಾಡಿ ಕೆಟ್ಟನು, he played and played, and (at last) was ruined (Nuḍigaṭṭu). ಒನ್ದೇ ಕಡೆಯಲ್ಲಿ ಕುಳಿತು ಕುಳಿತು ನಿಮಗೆ ಬಹಳ ಬೇಸಱಿ ಬನ್ದಿದ್ದೀತು, having sat and sat in one place you will be much wearied. ಬಿದ್ದು ಬಿದ್ದು ನಕ್ಕನು, he fell and fell and laughed (*i. e.* he rolled with laughter). ಆ ಬೇನೆಯಿನ್ದ ಸತ್ತು ಸತ್ತು ಉೞಿದನು, of that disease he died and died (*i. e.* was on the brink of death) and (still) remained alive.

4, enjoining on others the repetition of an act in order to encourage or incite them (Kriyâsamabhihâra, Šmd.), *e. g.* ನಡೆ ನಡೆಯೆನ್ದು ನುಡಿದರ್,

"walk, walk!" they said. ಇದಿರ್ಚಿದಿರ್ಚೆನೆ ಜಟಾಯು, when Jaṭâyu said "withstand, withstand!"

5, ordering with agitation, or hurrying an action; expressing anxiety, (čapalatĕ, Šmd.; sambhrama, Šabdânušâsana), *e. g.* ಒಪ್ಪಿಸೊಪ್ಪಿಸು ಸುದತಿಯಂ, deliver, deliver the woman with handsome teeth! ಆಣ್ಮಾಣ್ಮು, be manly, be manly! (Šmd.). ಹೋಗು ಹೋಗಯ್ಯ, go, go, sir! ಬಿಡು ಬಿಡಾ ಸನ್ದೇಹವ, give up, give up (your) doubt! ಎಲೆ ಬಸವ, ಕೊಡು ಕೊಡು ಪೆಟ್ಟಿಗೆಯ ಹೊನ್ನೆಲ್ಲವ, O Basava, give, give all the gold of the box! (Basavapurâṇa). ಒಡ್ಡೊಡ್ಡೊಡ್ಡೆನು ತೊಡ್ಡಿ ಮೇಳದವಳ್ ಕುಂಕುಮವಾರಿ ಕುಪ್ಪಳಿಸಿ ಪೊಯ್ದಳ್, the female buffoon saying "resist, resist, resist!" resisted, gathered saffron water and threw (it, Šmd.). ಇತ್ತ ಬಾ, ಇತ್ತ ಬಾ, ಇತ್ತ ಬಾ, come this way, come this way, come this way! ಆನೆ ಬನ್ದುದಾನೆ ಬನ್ದುದಾನೆ ಬನ್ದುದು, an elephant has come! an elephant has come! an elephant has come! ದಣ್ಡು ಬನ್ದುದೇಳಿ, ದಣ್ಡು ಬನ್ದುದೇಳಿ, ದಣ್ಡು ಬನ್ದುದೇಳಿ, the army has come, arise! the army has come, arise! the army has come, arise! (Šabdânušâsana).

6, continuous, unceasing action (sâtatya, Šabdânušâsana), *e. g.* ಬನ್ದಂ ಬನ್ದಂ, he came and came. ಪೋದಂ ಪೋದಂ, he went and went. ಕಣ್ಡಂ ಕಣ್ಡಂ, he saw and saw. ಬರೆವರೆ (-ಬರೆ), when (it) came and came (Ṛšv.). ಬರುತ್ತ ಹೋಗುತ್ತ, ಬರುತ್ತ ಹೋಗುತ್ತ ಇದ್ದಾನೆ, he is coming and going, coming and going (Nuḍigaṭṭu). ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆ ಆಯಿತು, the king's horse coming and coming (nearer) was (but) a donkey. ಆ ಚಕ್ರವರ್ತಿ ಶತ್ರುಗಳನ್ನು ಅಟ್ಟಿ ಕೊಣ್ಡು ಹೋಗುತ್ತಾ ಹೋಗುತ್ತಾ ಅವರ ದೇಶದ ಮಧ್ಯಭಾಗದಲ್ಲಿ ಹೋಗಿ ತಲಪಿದನು, that emperor pursued the foes, and going and going (*i. e.* marching on) arrived in the midst of their country. ಕುಱುಬರೆಲ್ಲ ಓಡುತ್ತೋಡುತ್ತ ಅಲ್ಲಿ ಬನ್ದು ನೋಡಿದರೆ ತೋಳ ಇಲ್ಲ, when all the shepherds running and running came there and looked, (there) was no wolf. ಅಡವಿಕುಱಿಗಳು ಮನುಷ್ಯರಿಗೆ ಮೊದಲು ಹೆದಱಿದಾಗ್ಯೂ ಬರ ಬರುತ್ತಾ (see § 172) ಈಲಾಗುತ್ತವೆ, though the ribfaced deer at first are afraid of men, coming and coming (*i. e.* in course of time) become attached (to them). ಅಫೀನ ಕಾಯಿ ಬರ ಬರುತ್ತಾ ಚಣ್ಡಿನಷ್ಟು ದೊಡ್ಡದಾಗುವದು, the pods of opium become in course of time as big as balls. ಹೋಗ ಹೋಗುತ್ತಾ ದಾರಿಯೊಳಗೆ ಅವರಿಬ್ಬರೂ ಆಲೋಚಿಸಿದ್ದೇನಂದರೆ, proceeding and proceeding on the road both of them reflected as follows.

7, completeness of an action (kriyâsâkalya, Šabdânušâsana), *e. g.* ಕೊಯ್ ಕೊಯ್ಯೆ ಎನ್ದು ಕೊಯ್ದಂ, he said (to himself and another) "reap,

reap!" and (thus) reaped (the whole harvest). ಪೊಯ್ ಪೊಯ್ಯೆ ಎನುತ್ತೆ ಪೊಯ್ದಂ, saying (to himself and another) "beat, beat!" he (thus) beat (consummately). ಬಾ ಬಾಯೆನುತ್ತೆ ಬನ್ದಂ, saying (to himself) "come, come!" and (thus) came. The Nuḍigaṭṭu has the following instances:—ಸವರು ಸವರೆನ್ದು ಸವರಿದನು. ಕುಡಿ ಕುಡಿಯೆನ್ದು ಕುಡಿದನು. ಎಣಿಸೆಣಿಸೆನ್ದು ಎಣಿಸಿದನು.

8, intensity, emphasis, high degree (âdhikya, Šabdânušâsana), *e. g.* ಆದುದಾದುದಂ, it has been done, it has been done! ಎಮಗಪ್ಪುದೆಮಗಪ್ಪುದು, it must become ours, it must become ours! ತೊಳ ತೊಳಗಿದುದು, it shone very much. ಬೆಳ ಬೆಳಗಿದುದು, it became very bright. ಮುೞು ಮುೞುಗಿದುದು, it sank rapidly. ಮೊೞ ಮೊೞಗಿದುದು, it roared very much (Šabdânušâsana). ಅಹುದಹುದು, it will become, it will become! ಅಸಮನೇತ್ರನು ವಿಷವನ್ ಆರೋಗಿಸಿದುದುಣ್ಟುಣ್ಟು, Šiva drank poison, it is (so), it is (so)! ಅಭವನ್ ಈ ಘಟದೊಳ್ ಉಣ್ಟುಣ್ಟೆನಿತು ಸನ್ದೇಹವಿಲ್ಲ, the unborn one (Rudra) is, is in this earthen vessel! (there) is not the least doubt. ಆಗಲಾಗಲಿ, may it become (so, or let it be so), may it become (so)! ಪರಸುಖಾಮ್ಭೋರಾಶಿಯೊಳು ನೆಱೆ ತೋದು ನೆಱೆ ತೋದು, having dipped well, having dipped well in the ocean of excellent joy (Basavapurâṇa). ಇಱುವೆಗಳು ಹಗಲೆಲ್ಲ ದುಡಿದು ದುಡಿದು ಕಷ್ಟಪಡುತ್ತವೆ, ants work and work and exert themselves the whole day. ಬೇಟೆಯಾಡುವ ಕೆಲಸಕ್ಕೆ ನಾಯಿಗಳು ಬೇಕೇ ಬೇಕು, dogs are absolutely required for the chase. ಕೆನ್ನೈದಿಲೆ ಸಿಕ್ಕೇ ಸಿಗುತ್ತದೆ, a red water-lily will certainly be found. ಜ್ಞಾನಿಗಳು ವಿಷಯಸುಖವನ್ನು ಬಿಟ್ಟೇ ಬಿಡುತ್ತಾರೆ, the wise will decidedly abandon sensual enjoyment. ಇದ್ದೇ ಇರುತ್ತದೆ, it certainly is. ಇದನ್ನು ಮಾಡೇ ಮಾಡುವಿರಿ, you will certainly do this.

ಪಥಮ್ ಇದಲ್ಲಲ್ಲ, this is not, is not the proper way. ಬೇಡ ಬೇಡ, it is not required, it is not required. ಬೇಡ ಬೇಡೆನ್ದು ಬಿಡಿಸಿದಂ, he said "it is not fit, it is not fit!" and loosened (him). ಅನ್ಯಾಯದ ಹಣವು ನಮಗೆ ಬೇಡೇ ಬೇಡ, we absolutely do not want money of (*i. e.* acquired by) injustice. ಒಲ್ಲೆನೊಲ್ಲೆನು, I will not, I will not. ಸಾಕು ಸಾಕು, enough, enough! ಸೃಷ್ಟಿಯಲ್ಲಿ ಅಯೋಗ್ಯವಾದವುಗಳು ಇಲ್ಲೇ ಇಲ್ಲ, certainly (there) are no useless things in creation.

ತಪ್ಪ ತಪ್ಪದೆ ಶರ ಶರಂಗಳಂ ತೆಗೆದೆಚ್ಚುತ, taking arrow after arrow and shooting without ever failing. ನಿಲ್ಲ ನಿಲ್ಲದೆ, without waiting in the least. ಬಿಡ ಬಿಡದೆ ನಡೆ ತಪ್ಪ ವೀಚಿಗಳು, waves that came incessantly.

In intensity, etc. triple repetition also occurs, *e. g.* ಬನ್ದ ಬನ್ದ ಬನ್ದಂ, he came, he came, he came. ಉಣ್ಡುಣ್ಡುಣ್ಡು ಪೋದಂ, he ate and ate and

ate, and (then) went. ತೊಳ ತೊಳ ತೊಳಗಿತ್ತು, it shone excessively. ಬೆಳ ಬೆಳ ಬೆಳಗಿತ್ತು, it became excessively bright (Šabdânušâsana). (ನಡ ನಡ ನಡುಗುತ್ತ, trembling excessively.)

9, pain or trouble (âbâdha, pîḍĕ, Šabdânušâsana), *e. g.* ಪೋದ ಪೋದಂ, alas, he went. ಬನ್ದ ಬನ್ದಯ್, alas, thou hast come. ಬಾರ್ ಬಾರೆಂ, oh, I do not come. ಪೋಪ ಪೋಪೆಂ, oh, I shall go.

10, succession (one after the other): totality, *e. g.* ಶಿಶುವಂ ಕಣ್ಡ ಕಣ್ಡ ಬಲೆಯರ್ ಕರೆ ಕರೆದರ್, the women who one after the other happened to see the child, called (it near). ಕಣ್ಡ ಕಣ್ಡವರಿಗೆಲ್ಲಾ ಹಲ್ಲು ಕಿರಿದರೂ ಗಣ್ಡ ಸತ್ತ ಮುಣ್ಡೆಗೆ ಬೋೞಿಸದೇ ಬಿಡರು, though the widow whose husband has died, grins at all she sees, they do not let her be unshaved. ಬನ್ದ ಬನ್ದವರು ನಿನ್ದಿಸಿದರೆ ಗಣ್ಡ ಸತ್ತ ದುಃಖ ಬಿಟ್ಟು ಹೋದೀತೇ, if all who come revile (her), will the grief caused by (her) husband's death leave (her)? ಕಣ್ಡ ಕಣ್ಡವರನ್ನೆಲ್ಲ ಸಮಾಧಾನ ಮಾಡುವದಕ್ಕಾಗಿ ಆ ಮುದುಕನು ಮಾಡಿದ ಯತ್ನವು ಕೆಯ್ಗೂಡಲಿಲ್ಲ, the endeavour made by the old man to please all he saw, was unsuccessful. ಕಣ್ಡ ಕಣ್ಡದನ್ನೆಲ್ಲ ಕಡಿಯುತ್ತಿದ್ದನು, he was cutting down every thing he saw. ಆಗ ಅವರು ಆ ಕಟ್ಟಿಗೆಗಳನ್ನು ನೋಡ (see § 181, note *c;* § 211, 5, foot-note) ನೋಡುವಷ್ಟರಲ್ಲಿ ಮುೞಿದು ಹಾಕಿದರು, then (after the bundle of sticks had been untied) they broke the sticks one after the other as they saw them.

11, variety, *e. g.* (ಶ್ರೀಮನ್ತರು) ತಾವು ಹೋದ ಹೋದಲ್ಲಿ ಜನರು ರಾಜನಿಷ್ಠೆಯಿನ್ದ ಮಾಡಿದ ಆದರಾತಿಥ್ಯಕ್ಕೆ ಬಹಳ ಮೆಚ್ಚಿದರು, he (the Prince of Wales) was much pleased with the courteous hospitality which the people, from attachment to the ruler, showed in the various places to which he went. ಅವನು (ರಾಮರಾಜನು) ಹೋದ ಹೋದಲ್ಲಿ ಮಶೀದಿಗಳನ್ನು ಕೆಡಿಸಿದನು, he (Râmarâja) destroyed the mosques in the various places to which he went. ಒಳ್ಳೇ ನಡತೆಯ ಮನುಷ್ಯನು ಎಲ್ಲರಿಗೂ ಬೇಕಾದವನು; ಹೋದ ಹೋದಲ್ಲಿ ಬಹುಮಾನ ಹೊನ್ದುವನು, a man of good conduct is welcome to all; in the various places to which he goes, he is respected.

ಆ ಹಾಳಿಯನ್ನು ಬೇಕು ಬೇಕಾದ ಹಾಗೆ ಕೊೞಿದು ಕಿಡಿಕೀ ಕನ್ನಡಿ ಮುನ್ತಾದವುಗಳನ್ನು ಮಾಡುವರು, that sheet of glass they cut according to the various requirements, and make window-panes, etc. (of it). ಬಡಿಗೆಯವನು ಕಟ್ಟಿಗೆಗಳನ್ನು ಕೊೞಿದು ಕೆತ್ತಿ ಬೇಕು ಬೇಕಾದ ಹಾಗೆ ಜೋಡಿಸಿ ಕೊಳ್ಳ ಬೇಕು, the carpenter has to cut the pieces of wood, to plane (them) and to join (them) according to the various requirements. ಕರಾಚೀ ಹತ್ತರದ ಹಳ್ಳಿಯವರು ಮೊಸಳೆಗಳನ್ನು ಪೂಜಿಸುತ್ತಿದ್ದರು; ಅವುಗಳಿಗೆ ಬೇಕು ಬೇಕಾದನ್ಥ ಸವಿ ಸವಿ ಆಹಾರಗಳನ್ನು ಒಯಿದು ನೈವೇದ್ಯ

ಕೊಡುತ್ತಿದ್ದರು, the villagers near Karâči used to worship alligators; they took, according to the various circumstances, different sweet eatables to them and presented them as offerings.

340. Certain verbs are often (especially in the colloquial dialect) **combined with others, being placed after their past participle** (gerund). They are principally the following: —

1, ಆಡು, to play, which gives the preceding verb the meaning of

a) playful motion or action, *e. g.* ಹುಡುಗರು ಕುಣಿದಾಡುತ್ತಾರೆ, ಒದಱಾಡುತ್ತಾರೆ, ಚೀ ಆಡುತ್ತಾರೆ, boys dance, cry and scream. ಒಣಗಿದ ಎಲೆ ಉದುರುವಾಗ್ಯೆ ಹಸಿಯೆಲೆ ನಗಾಡುತ್ತದೆ, when the dry leaves drop, the green leaves laugh. ಸರೋವರದೊಳ್ ಅಬಲೆಯರ್ ನಲವಿನ್ದೆ ಮುೞುಂಕಾಡಿದರ್, the women joyfully immersed themselves in the pond. ಕತ್ತೆ ಹೊರಳಾಡುತ್ತದೆ, the ass wallows.

b) moving here and there or about, *e. g.* ಹಾವು ಹರಿದಾಡುತ್ತದೆ, the serpent creeps about. ನಾಯಿಯ ಕುನ್ನಿಗಳು ಒನ್ದೆರಡು ತಿಂಗಳಿಗೆ ಚನ್ನಾಗಿ ಓಡಾಡ ಹತ್ತುತ್ತವೆ, young dogs begin to run about well in one or two months. ಆ ಜನರು ತಿರಿಗಾಡುತ್ತಾರೆ, those people wander (or walk) about. ಕಳ್ಳರು ಸುೞಿದಾಡುತ್ತಾರೆ, thieves roam about. ಹಕ್ಕಿ ಹಾಱಾಡುತ್ತವೆ, birds fly about.

c) moving backward and forward, moving to and fro as a body suspended, oscillation, waving, *e. g.* ಜೋಕಾಲೆ ತೂಗಾಡುತ್ತದೆ, the swing moves to and fro. ತೆನೆಗಳು ಒಲೆದಾಡುತ್ತವೆ, the ears of corn move. ತೂಕವಿದ್ದದ್ದು ತೂಗ್ಯಾಡೀತೇ, does that which is poised, oscillate? ಕೊರಳಲ್ಲಿ ನೇತಾಡುವ ಒಡವೆ, a pendulous ornament depending from the neck.

d) reciprocal motion done by one (or each) to the other: mutuality, *e. g.* ಚೂಣಿಯೊಳ್ ಬೆರಸಿ ಪೊಯ್ದಾಡಿದರ್, they met in the van and beat each other. ರಾಮ ರಾವಣರು ಹೊಡೆದಾಡುತ್ತಾರೆ, Râma and Râvaṇa beat one another. ಅವರಿಬ್ಬರು ಬಯ್ದಾಡುತ್ತಾರೆ, they revile each other. (Peculiar is ಮಾಱಾಡು, to exchange one thing for another; to sell).

It may be remarked here that ಆಡು is also suffixed to the infinitive ending in ಅಲ್ and ಅ, *e. g.* ನಳನು ಜೂಜಿನಿನ್ದ ರಾಜ್ಯವನ್ನು ಹೋಗಲಾಡಿದನು, Naḷa made (his) kingdom to go (*i. e.* lost his kingdom) by gambling. ರಥಗಳು ತಾಕಲಾಡಿದವು, the chariots struck one against the other. ಮಾನವಂ ಹೋಗಾಡಿದಂ, he made to go (*i. e.* lost his) honour.

2, ಇಡು, to put, which makes the idea of the preceding verb, so to say, complete, *e. g.* ಅಜ್ಞಾನಿಗಳು ವಿದ್ಯೆಯನ್ನು ಮುಚ್ಚಿಡುತ್ತಾರೆ, stupid persons

completely hide learning from sight. ಲುಬ್ಧರು ಹಣವನ್ನು ಹೂಱಿಡುತ್ತಾರೆ, greedy persons bury (their) money. ತಾನು ಕಣ್ಡದನ್ನೂ ಕೇಳಿದ್ದನ್ನೂ ವಿಚಾರದಿನ್ದ ಬರೆದಿಟ್ಟನು, he wrote down with deliberation what he saw and heard.

3, ಕುಡು, ಕೊಡು, to give, which occasionally, to some extent, complete the idea of the preceding verb, *e. g.* ಪದದೊಳ್ ಇರ್ದರ್ಥಮಂ ತನ್ತ್ರುಮ್ಮರ್ಥಾನು ಗುಣಮಾಗೆ ವಿಭಾಗಿಸಿ ಕುಡುವದಱಿಂ ವಿಭಕ್ತಿಗಳೆನಿಸುಗುಂ, from separating the meaning which is in a word, into species according to their various purposes, the vibhaktis (inflections) have got their name (Šabdamaṇi-darpaṇa, vṛitti to sûtra 35; in this case ಕುಡು is superfluous, as is shown by Kêšava's sûtra which has only ಪದಾರ್ಥಮಂ ವಿಭಾಗಿಸುವದಱಿನ್ದೆ ವಿಭಕ್ತಿ). ನೀನ್ ಎನಗೆ ವಸನ್ತನಾಗಮನವಂ ನೆಱೆ ಸೂಚಿಸಿ ಕೊಟ್ಟಯ್, thou indicatedst the arrival of spring to me very nicely. ರಾಮನು ಕೃಷ್ಣನಿಗೆ ಲೆಕ್ಕವ ತಿಳಿಸಿ ಕೊಟ್ಟನು, Râma made known arithmetic to Kṛishṇa. ಅವನು ನಿನಗೆ ಹೇಱಿ ಕೊಡುತ್ತಾನೆ, he tells thee. ಕುದುರೆಯು ಕಣ್ಬಲೆಯನ್ನು ಒಕ್ಕೊಟ್ಟಿತು (for ಒಗೆದು ಕೊಟ್ಟಿತು), the horse threw the double bag off (from its back). ಅದು (ಆ ಬೆಲ್ಲ) ತುಸು ಎನ್ದು ತಿಳಿದು, ಅದನ್ನು ಚೆಲ್ಲಿ ಕೊಟ್ಟನು, he thought that it (the piece of jaggory was) small, and threw it away.

4, ಬರು (ಬರ್), to come, which sometimes is used to complete the idea of the preceding verb, *e. g.* ಜವೆ ಆಱುವತ್ತು ದಿನಕ್ಕೆ ಬೆಳೆದು ಬಹ ಭೂಮಿ, a soil in which barley ripens in sixty days. ಮಹಾಸಾಗರದ ಆೞವು ಕೆಲವು ಕಡೆಯಲ್ಲಿ ಒಮ್ಬತ್ತು ಮೈಯ್ಲು ಇದ್ದನ್ತೆ ಕಣ್ಡು ಬನ್ದಿರುತ್ತದೆ, it has appeared that the depth of the ocean in some places is nine miles. ಮಹಾಸಾಗರದಲ್ಲಿಯು ಬೆಟ್ಟಗಳ ಶಿರೋಭಾಗಗಳು ಬಹಳ ಸ್ಥಳದಲ್ಲಿ ನೀರ ಮೇಲೆ ಕಣ್ಡು ಬರುತ್ತವೆ, the tops of mountains in the ocean in many places appear above the water.

It may be remarked that to say *e. g.* ಅಮ್ಮಾ, ಹೋಗುತ್ತೇನೆ, is unidiomatic in colloquial language, it is to be ಅಮ್ಮಾ, ಹೋಗಿ ಬರುತ್ತೇನೆ, mother, I go and come (back).

5, ಬಿಡು, to leave, which also makes the idea of the preceding verb somehow complete, *e. g.* ಅವನು ಹೆಣ್ಡತಿಯನ್ನು ಬಿಟ್ಟು ಬಿಟ್ಟನು, he left (his) wife. ರಾಮನು ವ್ಯಾಕರಣವನ್ನು ಕಲಿತು ಬಿಟ್ಟನು, Râma learned grammar. ಅದನ್ನು ಕೊನ್ದು ಬಿಡುತ್ತೇನೆ, I shall kill it. ಅವನು ಹೋಗಿ ಬಿಟ್ಟನು, he went away. ಕುದುರೆಯನ್ನು ಮಾಱಿ ಬಿಟ್ಟನು, he sold the horse.

6, ಹಾಕು, to put, to throw, which also makes the idea of the preceding verb somehow complete, *e. g.* ಇವನನ್ನು ವರ್ಗದೊಳಗಿನ್ದ ತೆಗೆದು ಹಾಕಿದರು, they removed him out of the class. ಬಾಯ್ಬಡಕರು ಅನ್ಯರ ವಸ್ತುಗಳನ್ನು

ಎತ್ತಿ ಹಾಕುತ್ತಾರೆ, great talkers remove the things of others by stealing. ಭೀಮನು ಕೌರವರನ್ನು ಕೊನ್ದು ಹಾಕಿದನು, Bhîma killed the Kauravas. ಕಟ್ಟಿಗೆಗಳನ್ನು ಮುಱಿದು ಹಾಕಿದರು, they broke the pieces of wood. ನಾಯಿಗಳನ್ನು ಒನ್ದು ಗಿಡಕ್ಕೆ ಕಟ್ಟಿ ಹಾಕಿದರು, they tied the dogs to a tree.

7, ಹೋಗು, to go, which likewise makes the idea of the preceding verb somehow complete, *e. g.* ಲೆಕ್ಕವು ತಪ್ಪಿ ಹೋಯಿತು, the account is wrong. ದುಷ್ಟರು ಹಾೞಾಗಿ ಹೋಗುತ್ತಾರೆ, bad people will be ruined. ಕಿಸೆಯ ಒನ್ದು ತೂತಿನೊಳಗಿನ್ದ ದುಡ್ಡು ಬಿದ್ದು ಹೋದವು, the duḍḍus fell out of a hole in (his) pocket. ಕುದುರೆ ಕನ್ದಕದೊಳಗೆ ಬಿದ್ದು ಸತ್ತು ಹೋಯಿತು, the horse fell into a ditch and died. ಮಾತು ಬನ್ದಾಗ ಸೋತು ಹೋಗುವವನೇ ಜಾಣ, when a dispute comes on, even he is a wise man who submits. ಕೆಟ್ಟು ಹೋಗುವ ಹಾಗಿದ್ದಾನೆ, he is likely to be ruined.

341. In order to form what may be called a sort of reflexive verb, ಕೊಳ್ (ಕೊಳ್ಳು), to take, is added to the past participle of a preceding verb (to that of ಕೊಳ್ itself too), **also if this participle is a short one** (see § 165, *a,* 1—7, and *cf.* § 169). We have already met with this kind of formation in the passive (see § 315, 2, *e; cf.* also § 260). This so-called reflexive verb is used to denote that the action takes place in behalf of the subject (agent), regarding the subject's good or damage, and so on as circumstances require; it will be seen that 'to take', the original meaning of ಕೊಳ್, will not unfrequently offer a sufficiently clear explanation of its meaning.

The following instances taken from the three dialects will elucidate its use:—

ಈ ಕ್ರಮದಿನ್ ಅಱಿದು ಕೊಳ್ಗೆ, in this order one may learn to know (the terminations of the instrumental).—ಕಮಲಮುಖೀ, ತಿಳಿದು ಕೊಳ್ವುದೆನ್ನಯ ಮತದಿಂ, O wife, understand (the daṇḍaka metre) even through my rule. ಮೂಕರು ಮೋಸಗಾಱರಿರುತ್ತಾರೆನ್ದು ಹೆಡ್ಡರು ತಿಳಿಯುತ್ತಾರೆ; ಅದಱನ್ತೆಯೇ ಈ ತೊತ್ತು ಆದರೂ ತಿಳು ಕೊಣ್ಡಳು, foolish people think that the dumb are tricksters; thus also this maid-servant thought. ಗೂಗೆಗಳು ಕೂಗಿದರೆ ಕೇಡಾಗುವದೆನ್ದು ಬುದ್ಧಿಹೀನರು ತಿಳ ಕೊಣ್ಡು ಹೆದಱುತ್ತಾರೆ, foolish persons think that if owls cry, evil will happen, and are afraid. ಬಿಸಲೊಳಗೆ ದಾರಿ ನಡೆದು, ದಣಿದು, ನೀರಡಿಸಿ, ಒಬ್ಬ ಬ್ರಾಹ್ಮಣನು ಒನ್ದು ಈಚಲ ಮರದ ನೆರಳಿಗೆ ಹೋಗಿ, ಕುಳಿತು ಕೊಣ್ಡು, ತಮ್ಬಿಗೆಯೊಳಗಿನ ಹಾಲು ಕುಡಿಯ ಹತ್ತಿದನು; ಅದನ್ನು ಎರಡನೇ ದಾರಿಕಾಱರು ನೋಡಿ, ಈ ಹಾರುವನು ಹೆಣ್ಡ ಕುಡಿಯುತ್ತಾನೆನ್ದು ತಿಳು ಕೊಣ್ಡು, ಊರೊಳಗೆ ಸುದ್ದೀ ಬೀಱಿದರು, a Brâhmaṇa who had travelled in the hot sun, felt fatigued and had become thirsty,

went to the shade of a wild date tree, sat down and began to drink the milk that was in (his) copper vessel; other travellers saw it, thought "this Brâhmaṇa drinks toddy", and spread the news in the town.—ತಾವೆ ಕೃಪಾಶೂನ್ಯರೆನ್ದು ನಿನ್ದಿಸಿ ಕೊಣ್ಡರ್, even they blamed themselves that they (were) destitute of pity.—ಪರರಿಗೆ ಕೇಡ ಮಾಡಿ ತನಗೆ ಲೇಸು ಮಾಡಿ ಕೊಳ್ಳುಹ, causing damage to others and causing welfare to one's self. ಮಾಡಿ ಕೊಣ್ಡ ನಣ್ಟನು, a friend that one has acquired. ಒನ್ದು ಕತ್ತಿ ಮಾಡಿ ಕೊಣ್ಡನು, he made himself a knife. ಅವನು ತನಗೆ ತಾನೇ ನೋವು ಮಾಡಿ ಕೊಳ್ಳುತ್ತಿದ್ದಾನೆ, he is hurting even himself. ರಾಮಾ, ನಿನ್ನ ಕಾಲಿಗೆ ಏನು ಮಾಡಿ ಕೊಣ್ಡೆ, Râma, what hast thou done to thy foot? ಇವನು ರಾಜಕನ್ನಿಕೆಯನ್ನು ಮದುವೆ ಮಾಡಿ ಕೊಣ್ಡನು, he married a king's daughter. ಆ ಗುಬ್ಬಿ ಎಲ್ಲಿ ಮನೆ ಮಾಡಿ ಕೊಣ್ಡು ಇರುತ್ತದೆ? ನಮ್ಮ ಮನೆಯ ಮಾಳಿಗೆಯ ಕುವ್ವೇ ಮೇಲೆ ಗೂಡು ಕಟ್ಟಿ ಕೊಣ್ಡು ಇರುತ್ತದೆ, where has that sparrow made (its) house? it has built (its) nest on the balustrade of the flat roof of our house. ಒಡವೆಗಳನ್ನು ಮಾರಿ ಹಣ ಮಾಡಿ ಕೊಣ್ಡನು, he sold (his) jewels and (thus) made money. ಈ ಹುಡುಗನು ಕಣ್ಡ ಹುಡುಗರನ್ನೆಲ್ಲ ಗೆಳೆಯರನ್ನು ಮಾಡಿ ಕೊಳ್ಳ ಬೇಕೆನ್ದು ಬಹು ಆತುರ ಪಡುತ್ತಿದ್ದನು, this boy felt great desire to make all the boys he saw his friends.—ವಸಿಷ್ಠಪುತ್ರ ಶೋಕದಿನ್ದ ಕೊರಳಲ್ಲಿ ಕಲ್ಲ ಕಟ್ಟಿ ಕೊಣ್ಡು ಬಿದ್ದರೆ ನೂಱು ತೆಱನಾದ ನದಿ, the river which became a hundred branches when the son of Vasishṭha, from sorrow, tied a stone to (his) neck and fell (into it). ಸಪ್ತದ್ವೀಪಗಳಂ ಕಟ್ಟಿ ಕೊಣ್ಡು, having made the seven divisions of the terrestrial world his own.—ಮುಸುಡನ್ ಎತ್ತಿ ಕೊಣ್ಡು ಇರ್ಪವನು, he who has lifted up (his) face.—ಕಳದು ಕೊಳುಹ, grasping (for one's self). ಒಬ್ಬ ಸಾವಕಾರನು ವ್ಯಾಪಾರದೊಳಗೆ ಎಲ್ಲ ಹಣ ಕಳ ಕೊಣ್ಡನು, a certain merchant lost all (his) money in trade. ನೀವು ಒನ್ದು ಒಣ್ಟೆಯನ್ನು ಕಳ ಕೊಣ್ಡನ್ತೆ ತೋಱುತ್ತದೆ, it seems as if you had lost a camel.—ಪರರರ್ಥವ ಸೆಳೆದು ಕೊಮ್ಬ ಪಾತಕತನಂ, the sin of robbing the things of others.—ತನ್ನ ಸೋಲವ ನುಡಿದು ಕೊಮ್ಬಂ, he who confesses his being overcome.—ರಾಮನು ಪುಸ್ತಕವನ್ನು ಓದಿ ಕೊಳ್ಳುತ್ತಾನೆ, Râma reads a book (for his own benefit).—ನಾನು ಈ ಚೂರಿಯನ್ನು ನಾರಾಯಣನ ಗಣ್ಟು ಬಿಚ್ಚಿ ತೆಕ್ಕೊಣ್ಡೆನು, I opened the bundle of Nârâyaṇa and took his knife (to myself).—ಆ ಹಾಲು ಮಾಱಿ ಕೊಣ್ಡು ಅವನು ಹೊಟ್ಟೆ ತುಮ್ಬಿ ಕೊಣ್ಡನು, he sold that milk and (thus) satisfied the wants of (his) stomach.—ಕಟ್ಟ ಕಡೆಯಲ್ಲಿ ಅವನು ತನ್ನನ್ನೇ ಮಾಱಿ ಕೊಣ್ಡನು, at last he sold even himself.—ಪುಸ್ತಕ ಕೊಣ್ಡು ಬರುವೆನು, I shall buy a book (for myself) and return.—ರೊಕ್ಕಾ ಕೊಟ್ಟು ಕೊಣ್ಡು ಹೀಗೆ ಕೆಡಿಸಿದರೆ ನಮಗೇ ಕೇಡು, if you thus wastefully spend money (in your own behalf), it will be even our ruin.—

ಸಿಪಾಯಿಯ ಮಗನು ತನ್ದೆಯ ಹದನಾದ ಕತ್ತಿಯನ್ನು ತಕ್ಕೊಣ್ಡು, ಪಲ್ಲೆ ಹೆಚ್ಚಲಿಕ್ಕೆ ಹೋಗಿ, ತನ್ನ ಬೊಟ್ಟು ಕೊಯಿದು ಕೊಣ್ಡನು, the native soldier's son took the sharp sword of his father, went to mince vegetables (with it) and (in doing so) cut off one of his fingers.— ನೀನು ಎದೆ ಬಡ ಕೊಣ್ಡು ಚಿನ್ತೆ ಮಾಡ ಬೇಡ, you must not (thus) beat your chest and grieve.— ಬೆಳಿಗ್ಗೆ ಕುಱಿಗಳನ್ನು ಹೊಡ ಕೊಣ್ಡು ಹೋಗಿ ಅಡವಿಯೊಳಗಿನ ಗಿಡ ಗಣ್ಟಿಗಳನ್ನು ಮೇಯಿಸಿದನು, at dawn he drove (his) sheep to the jungle and made them eat the shrubs therein.— ಸಿಂಹಗಳೂ ಹುಲಿಗಳೂ ನನ್ನನ್ನು ಕಣ್ಡು ತಮ್ಮ ತಮ್ಮ ಗವಿಗಳೊಳಗೆ ಹಗಲೆಲ್ಲ ಮಲಗಿ ಕೊಳ್ಳುತ್ತವೆ, when lions and tigers see me (the sun), they lie down the whole day in their respective dens. ಪೂರ್ವರಾತ್ರೆಯಲ್ಲಿ ಬೇಗ ಮಲಗಿ ಕೊಣ್ಡು ಬೆಳಿಗ್ಗೆ ಬೇಗ ಏಱುವದು ಬಹಳ ಹಿತವು, it is very salutary to lie down (to sleep) quickly (early) in the first part of the night and to rise quickly (early) at dawn.— ಹೊದ್ದು ಕೊಮ್ಬು ಸೀರೆ, a garment that is wrapped round one's self. ಅವನಿಗೆ ಹೊದ್ದು ಕೊಳ್ಳಲಿಕ್ಕೆ ಅಱಿವೆ ಅಂಚಡಿ ಇದ್ದಿಲ್ಲ, he had no cloth whatever to cover himself with.— ಯಜಮಾನನು ಕೆಯ್ ಕಾಲು ತೊಳ ಕೊಳ್ಳಲಿಕ್ಕೆ ಎದ್ದನು, the master stood up to wash (his) hands and feet.— ಆಕಳು ಮೆಯ್ ಮೇಲೆ ಆಗಾಗ್ಗೆ ಬಾಲಾಯಾಕೆ ಬಡ ಕೊಳ್ಳುತ್ತದೆ? ನೊಣಾ ಜಾಡಿಸಿ ಕೊಳ್ಳುತ್ತದೆ, why does the cow now and then beat (with its) tail on (its) body? It drives the flies away.— ಮಱಿದುಮ್ಬಿಗಳ ವೃನ್ದಮಂ ಕೂಡಿ ಕೊಣ್ಡೆಳೆವೆಲರ್ ಬನ್ದುದು, the breeze joined a flock of young black bees and came along (with them).— ಕಾಲಿಗೆ ನೋವು ಆದದಱಿನ್ದ ಎಣ್ಟು ದಿವಸ ನಾನು ಸಾಲೆಗೆ ಹೋಗಲಾಱದೆ ಮನೆಯಲ್ಲಿಯೇ ನಿನ್ತು ಕೊಣ್ಡೆನು, because I had got pain in (my) feet, I could not go to school for eight days and remained at home.— ಅದು ಪಾನ್ಥಸ್ಥರು ಇೞಿ ಕೊಳ್ಳುವದಕ್ಕಾಗಿ ಕಟ್ಟಿದ ಧರ್ಮಛತ್ರವು, that is a house built with the object that travellers may alight (or lodge therein).— ಗಣ್ಡಾನ್ತರ ಬನ್ದಾಗ ಉೞಿ ಕೊಳ್ಳುವ ಹಂಚಿಕೆಗಳು ಏನಾದರೂ ನಿನಗೆ ಗೊತ್ತು? do you know any means by which one may escape when danger approaches.— ರಾಯನು ಒನ್ದು ಆನೇ ಮೇಲೆ ಕುಳಿತು ಕೊಣ್ಡು ವಿಜಯನಗರಕ್ಕೆ ಬನ್ದನು, the king took a seat on an elephant and came to Vijayanagara. ಮರದ ನೆರಳಿಗೆ ಹೋಗಿ ಕೂತು ಕೊಣ್ಡನು, he went to the shadow of a tree and sat down.— ಬೇನೆಯಿನ್ದ ದಣು ಕೊಣ್ಡವ, he who is exhausted by sickness.— ಒನ್ದು ಕತ್ತಿ ಮಾಡಿಸಿ ಕೊಣ್ಡನು, he had a knife made (for himself).— ತನ್ನನ್ನು ತಾನೇ ಕೆಡಿಸಿ ಕೊಣ್ಡನು, he ruined himself.— ಬೆಸನ ಹೇೞಿಸಿ ಕೊಳುಹ, obtaining permission. ಸಾಕ್ಷಿ ಹೇೞಿಸಿ ಕೊಣ್ಡನು, he got evidence (in his own interest).— ಒನ್ದು ಜಾತಿಯ ಚಿರ್ಚ ಸಮುದ್ರದ ದಣ್ಡೆಯಲ್ಲಿದ್ದು ಕೊಣ್ಡು, ಕೊೞಕ ಮಾಂಸ ಮುನ್ತಾದ್ದನ್ನು ತಿನ್ನುತ್ತವೆ, a kind of leopard lives on the sea-coast, and eats decayed flesh and other

things.— ನಾಲ್ಕು ಮನ್ದಿ ಕಳ್ಳರು ಕೂಡಿ, ಪಟ್ಟಣಸೆಟ್ಟೀ ಮನೆಯ ಕನ್ನಾ ಕೊಱೆದು, ಇದ್ದ ವಸ್ತು ಒಡವೆಗಳನ್ನೆಲ್ಲ ಕದ್ದು ಕೊಣ್ಡು, ಹಂಚಿ ಕೊಳ್ಳುವದಕ್ಕೆ ಅಡವಿಯೊಳಗಿನದೊನ್ದು ಹಾೞು ದೇಗುಲದ ಹಾದೀ ಹಿಡಿದರು, four thieves united, made a hole (in the wall) of the house of the chief merchant, stole all the valuable things that were (there), and took the road to a dilapidated temple in the jungle in order to divide (them among themselves).— ದನ ಕಱು ಮುನ್ತಾದವುಗಳನ್ನು ಸರಿಯಾಗಿ ಮೂಱು ಪಾಲು ಮಾಡಿ ಹಂಚಿ ಕೊಳ್ಳಿರೆನ್ದು ವರ್ತಕನು ತನ್ನ ಮೂಱು ಮನ್ದಿ ಮಕ್ಕಳಿಗೆ ಹೇೞಿ, ಸತ್ತು ಹೋದನು, the merchant told his three children to make three equal parts of the cattle etc. and divide them (among themselves), and died.— ಆ ಹೆಂಗಸು ತಲೆಯ ಮೇಲೆ ಏನು ಹೊತ್ತು ಕೊಣ್ಡು ಬರುತ್ತಾಳೆ, what does that woman carry on (her) head and comes (here)?— ಹೆಣ್ಡತಿಯನ್ನು ಕರೆದು ಕೊಣ್ಡು, ಊರಿಗೆ ಹೊಱಟು ಹೋದನು, he called (his) wife and went abroad (with her).— ಕುದುರೆ ಕಣ್ಡು ಕೊಣ್ಡರೋ, did they find the horse?— ಅದನ್ನೆಲ್ಲಿ ಇಟ್ಟು ಕೊಣ್ಡಳು, where did she hoard it? ಈ ಕುದುರೆ ಇಟ್ಟು ಕೊಳ್ಳುತ್ತೀರೇನು, are you going to keep this horse?— ದೊಡ್ಡ ಹುಡುಗನು ತೊಟ್ಟು ಕೊಂಡ ಅಂಗಿ, the jacket which the big boy had put on.— ನೀವು ಯಾರಯ್ಯಾ? ಹುಚ್ಚು ನಾಯಿಗಳನ್ನು ಹಿಡ ಕೊಣ್ಡು ಎಲ್ಲಿಗೆ ಹೋಗುತ್ತೀರಿ? who are you, sir? where do you go having seized (*i. e.* with) the mad dogs? ಕೊಡ್ಲೀ ಹಿಡ ಕೊಣ್ಡು, ತೋಟಕ್ಕೆ ಬನ್ದನು, he seized the axe, and went to the garden. ಹಿಡು ಕೊಳ್ಳುವದು, seizing (laying hold of).— ಸಾಲೆಯಲ್ಲಿ ಅಯ್ಯನವರ ಅಪ್ಪಣೆಯನ್ತೆ ನಡ ಕೊಳ್ಳ ಬೇಕು, at school (one) must conduct one's self according to the command of the master. ನಾವು ತಾಯಿ ತನ್ದೆ ಅಕ್ಕ ತಂಗಿ ಅಣ್ಣ ತಮ್ಮನ್ದಿರ ಕೂಡ ಪ್ರೀತಿಯಿನ್ದ ನಡ ಕೊಳ್ಳ ಬೇಕು, we must converse in love with (our) parents, sisters and brothers. ಅವರೆಲ್ಲರ ಮೇಲೆ ಒಬ್ಬನೇ ಅರಸು ಆಳುತ್ತಿರುತ್ತಾನೆ; ಅವನಿಗೂ ಅವನು ನೇಮಿಸಿದ ಅಧಿಕಾರಿಗಳಿಗೂ ಅವರು ಭಯ ಭಕ್ತಿಯಿನ್ದ ನಡ ಕೊಳ್ಳ ಬೇಕು, over them all rules one king; they must obey him and the officers appointed by him with fear and devotion. ಮುಖ್ಯವಾದದೊನ್ದು ಕುದುರೆ ಹಿಣ್ಡಿನ ಮುನ್ದೆ ಇರುತ್ತದೆ, ಅದಱ ಸೂಚನೆಯನ್ತೆ ಎಲ್ಲ ಕುದುರೆಗಳು ನಡ ಕೊಳ್ಳುವವು, a chief horse is in front of the herd, all the horses follow its guidance.— ನಿಂಗಪ್ಪನು ಒಬ್ಬ ವೈದ್ಯನ ಮನೆಗೆ ಹೋಗಿ, ಅವನ ಕೈಯ್ ಕಾಲು ಬಿದ್ದು— ಸ್ವಾಮೀ, ನನ್ನ ಮಗನೊಬ್ಬನು ಮನೆಯಲ್ಲಿ ಬೇನೆಯಿನ್ದ ಮಲಗಿದ್ದಾನೆ; ಅದಕ್ಕೆ ದಯ ಮಾಡಿ ಮನೆತನಕ ಬನ್ದು, ಅವನನ್ನು ನೋಡಿ, ಔಷಧ ಕೊಟ್ಟರೆ ನಾನು ಬಾೞಿರುವ ಮಟ್ಟಿಗೆ ತಮ್ಮ ಉಪಕಾರ ಮಱೆಯಲಿಕ್ಕಿಲ್ಲ ಎನ್ದು, ಹೇೞಿ ಕೊಣ್ಡನು, Niṅgappa went to the house of a physician, fell at his hands and feet, and spoke "sir, a son of mine lies prostrate in the house from sickness; if therefore you please to come to (my) house, examine him and give (him) medicine,

I shall not forget your kindness as long as I live". ಹೊನ್ನನು – ವೈದ್ಯನೇ, ಸುಮ್ಮನೇ ಔಷಧಗಳನ್ನು ಯಾಕೆ ತರಿಸುತ್ತೀರಿ? ನಾನು ಅವನ್ನು ಎನ್ದಿಗೂ ತಕ್ಕೊಳ್ಳುವದಿಲ್ಲ ಎನ್ದು, ವಿಚ್ಛಿನ್ನವಾಗಿ ಹೇೞಿದನು. ಆಗ ವೈದ್ಯನು ಯಾಕೆ ತಕ್ಕೊಳ್ಳುವದಿಲ್ಲ ಎನ್ದು ಕೇಳಲು— ದಯ ಮಾಡಿ ಆ ಮಾತು ಕೇಳ ಬೇಡರಿ! ನಾನು ಹೇೞಲಾಱೆನು ಎನ್ದು, ಸುಮ್ಮನಾದನು. ಅದಕ್ಕೆ ವೈದ್ಯನು – ಏನಯ್ಯಾ? ಹೇೞುವದಕ್ಕೆ ಅಡ್ಡಿಯೇನು? ನೀನು ಒಳ್ಳೇ ಹಟಮಾರಿ ಕಾಣುತ್ತೀ ಅನ್ನಲು, ಹೊನ್ನನು – ಸ್ವಾಮೀ, ದಯ ಮಾಡಿ ಹಾಗೆ ಮಾತ್ರ ತಿಳಿಯ ಬೇಡರಿ! ಎನ್ದು, ವಿನಯದಿನ್ದ ಹೇೞಿ ಕೊಣ್ಡನು, "doctor", Hŏnna (Niṅgappa's son who was not sick, but nearly starved, as he refused to take any food himself in order that his poor father, brothers and sisters might have something to eat) said positively, "why do you send for medicines (on my account)? I shall never take them". Then the physician asked "why will you not take (them)?" Hŏnna answered "please, do not ask so. I cannot tell (you)", and became silent. Thereupon the physician said "sir, what obstacle is there to telling (me)? You seem to be a perfect obstinate fellow". Then Hŏnna entreated (him) with humility, saying "O sir, please, only do not think so!" ಅವರಿಗೆ ಹೇೞಿ ಕೊಳ್ಳ ಬೇಕು, you should speak to him. ಹೇೞಿ ಕೊಳ್ಳಲಿಕ್ಕೆ ಮಾತದೆ, I have something to say (to you).— ಬೇಡಿ ಕೊಣ್ಡು ತಿನ್ನ ಬಹುದು, ಕದ್ದು ಕೊಣ್ಡು ತಿನ್ನ ಬಾರದು, one may solicit (and receive alms) and (thus) eat, (but) by stealing one should not eat.— ನಾನು ತಲೆಯ ಮೇಲೆ ಕಿರೀಟ ಹಾಕಿ ಕೊಣ್ಡು, (the sun says) "I having put a diadem on (my) head". ದಯ ಮಾಡಿ ಇದೊನ್ದು ಸಾರಿ ಆತನ ತಪ್ಪು ಹೊಟ್ಟೆಯೊಳಗೆ ಹಾಕಿ ಕೋ, please, put his fault in your belly (*i. e.* conceal and forgive it) this one time.— ಆ ಆನೆಯನ್ನು ಆತನು ಹತ್ತಿ ಕೊಣ್ಡು, ತಿರಿಗಿ ಆನೆಗುನ್ದಿಗೆ ಹೋದನು, he mounted that elephant and returned to Ânĕgundi.— ಮೋಡವೆಮ್ಬ ಶೆಲ್ಲೆಯನ್ನು ತಲೆಗೆ ಸುತ್ತಿ ಕೊಳ್ಳುತ್ತೇನೆ, (the sun says) "I put a muslin cloth, that is to say clouds, round (my) head".

For comparison's sake the following instances which contain verbs without ಕೊಳ್ (and of which some show at first sight a not easily perceivable difference in meaning from the above-given ones) may here be introduced:—

ರೂಢಾನ್ವರ್ಥಾಂಕಿತಮ್ ಎನ್ದು ನಾಮಂ ಮೂದೆಱಮ್, ಅಱಿಗೆ (commentator ತಿಳಿಗೆ), those ready nouns are of three kinds, *viz.* rûḍha, anvartha, aṅkita; know!—ನಲ್ಲಳ್, ನಿನ್ನ ಕಾಲ್ವಿಡಿದಪೆಂ, ತಿಳಿ, O beloved woman, I seize thy feet; know! ತಂಗಿಗೆ ತಕ್ಕ ವರನ್ ಈತನೆನ್ದು, ಮದನಂ ತಿಳಿದಂ, Madana perceived that this man (was) a suitable husband for (his) younger sister. ತರಲಾಕ್ಷಿಯದಕ್ಕೆ ಮತ್ತೊನ್ದಭಿಪ್ರಾಯಮಂ ತಿಳಿದಳ್, the woman with tremulous eyes understood it differently. ಅತಿಜೀವಮ್ ಇರಲು ಮೋಕ್ಷದ ಗೊತ್ತು ತಿಳಿ, whilst yet living learn the marked peculiarities of final liberation!— ಮನೆಯಂ

ಮಾಡಿದಂ, he made a house. ಆನ್ ಎಲ್ಲರ್ ಈಗಳ್ ಅಶ್ವಮೇಧವಂ ಮಾಡುವಂ, let all of us now make a horse-sacrifice! ಸ್ನಾನ ಮಾಡಿರೊ ಜ್ಞಾನತೀರ್ಥದಲಿ, bathe in the sacred water of knowledge! ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು, build a house and (then) see, marry (*i.e.* unite in wedlock) and (then) see! ಒನ್ದೆಡೆಯೊಳ್ ಕಟ್ಟುವುದೆ ಪಿರಿಯ ಪುಲಿಯುಮಂ ಕವಿಲೆಯುಮಂ, must (one) tie a royal tiger and a brown cow in one place? ಆಳು ಕಟ್ಟಿದವನೇ ಅರಸು, ಕೂಟು ಇಕ್ಕಿದವನೇ ದಾತ, one who has enlisted soldiers (is) a king, one who has distributed boiled rice (is) a donor.— ಮಾವನ ಮನೆಯೊಳ್ ಆಂ ತಲೆಯೆತ್ತಿ ನಡೆಯೆಂ, I shall not lift up (my) head and walk in my uncle's house.— ತಕ್ಕ ಔಷಧ ಕೊಡಿಸಿ, ಪಥ್ಯ ಮಾಡಿಸಿ, ಬೇಗ ಅವರ ಬೇನೆಯನ್ನು ಕಳೆಯುವರು, they will have proper medicine given, have diet prescribed, and quickly remove their sickness.— ಬಾಣಮಂ ಸೆಳೆದಂ, having pulled an arrow (out of his quiver).— ಸತ್ಯಮಂ ನುಡಿ, speak the truth! ಸೋಲೆ ನುಡಿವವನು, he who acknowledges that (he) has been overcome.— ವೇದವನ್ ಓದಿದಾತನು, he who has read the vêdas. — ತೆಗೆದಯ್ ಮೋಕ್ಷದ ಬಟ್ಟೆಯಂ, thou tookest the road of final liberation.— ಹೆಣನೊಳ್ ಪ್ರಾಣವಂ ತುಮ್ಬುವ ಸಮರ್ಥಿಕೆ, power which fills life into a corpse.— ಕಳ್ಳ ಮಾಱುವ ಗೃಹ, a house in which toddy is sold. ಈ ಆನೆಗಳನ್ನು ಯಾರಿಗೂ ಮಾಱ ಬೇಡಿರಿ, you should not sell these elephants to anybody.— ಸಾಲವ ಕೊಮ್ಬುವನು, he who borrows. ಮದ್ಯವ ಕೊಮ್ಬ ಠಾವು, a place where spirits are bought. ನಾನು ಒನ್ದು ಕುದುರೆ ಕೊಳ್ಳ ಬೇಕು, I must buy a horse. ಎರಡು ದುಡ್ಡಿನ ಹಾಲು ಕೊಣ್ಡನು, he bought milk for two duḍḍus.— ಕಾಮವಸ್ತುಗಳಂ ಕುಡುವುದು, granting the things desired. ಕೊಟ್ಟು ಕೆಟ್ಟವನಿಲ್ಲ, ತಿರಿದು ಬದುಕಿದವನಿಲ್ಲ, (there) is none who has given (alms, etc.) and (thus) been ruined, (there) is none who has (idly) roamed about (in quest of alms) and (thus) lived (happily).— ಕೊಯ್ದ ಕಾಲನ್ನು ನಾಯಿ ತಿನ್ದರೇನು? ನರಿ ತಿನ್ದರೇನು? what does it matter whether a dog eats the leg that has been cut off, or whether a jackal eats (it)? ಮೂಗು ಕೊಯಿದರೂ ಮೂಗಿನ ಸೊಳ್ಳೆ ಉಣ್ಟಲ್ಲ? ಅನ್ದ ಹಾಗೆ, as if (one) said "though (one's) nose be cut off, do not the nostrils remain?"— ಒಬ್ಬ ಕೂಲಿಕಾಱನು ತನ್ನ ಹೆಣ್ಡತಿಯನ್ನು ಆಗಾಗ್ಗೆ ಬಡಿಯುವವನು, a day-labourer used to beat his (quarrelsome) wife repeatedly.— ಬೆತ್ತದ ಪೆಟ್ಟು ಹೆತ್ತವರು ಹೊಡೆದರೆ ನೋಯದೇ, if (one's) parents apply the blows with a cane, do they not pain?— ಕುಳ್ಳಿರಲಱಿಯದೆ ಮೇಲು ಮೊಗವಾಗಿ ಮಲಗಿಹ ಮಗವು, an infant that cannot (yet) sit up and lies with (its) face turned upwards. ಅಡವಿಯೊಳಗೆ ಒನ್ದು ಮರದ ಕೆಳಗೆ ಒನ್ದು ಹುಲೀ ಮಱಿಯು ಮಲಗಿತ್ತು, a young tiger lay in the jungle under a tree.— ಅಂಗಡೀ ಮಾಱಿ, ಗೊಂಗಡೀ ಹೊದ್ದ, he sold (his) shop and put on a blanket.— ಅವನ ತನ್ದೆಯು ಅವನಿಗೆ ಏನಾದರೂ ಕೊಣ್ಡು ತಿನ್ನು ಎನ್ದು ನಾಲ್ಕು ದುಡ್ಡು ಕೊಟ್ಟನು, his father gave him six duḍḍus, saying "buy something to eat!"— ಚನ್ದ್ರಹಾಸಂ ನಿದ್ರೆಯಂ ತ್ಯಜಿಸಿ, ಮೊಗದೊಳೆದು, ಮುಕ್ಕುಳಿಸಿದಂ, Čandrahâsa quitted sleep, washed (his) face, and rinsed his mouth.— ಆತನ ತಲೇ ಹುಳುಗಳನ್ನು ಜಾಡಿಸಿದೆನು, I dusted away the insects of his head (*i. e.* I beat him soundly).— ಬೆಳುದಿಂಗಳೊಡನೆ ಕೂಡಿದ ಇರುಳು, a night united with moonlight. ದಕಾರದೊಳ್ ಕೂಡಿದ ಯಕಾರಕ್ಕಂ ದ್ವಿತ್ವದ ಜಕಾರಮ್ ಅಕ್ಕುಂ, and the letter ಯ್ combined with ದ್ becomes ಜ್ಜ್.— ನಿನ್ದ ಇರ್ದವ, a man who stands. ನಿನ್ದಂ, a man who stands.— ಮರದತ್ತಣಿನ್ದಿೞಿದಂ, he came down from the tree. ದಣ್ಡು ಇಱಿದಿದ್ದ ಸ್ಥಳ, a place where an army is encamped. — ಕಱು ತಾಯ ಬೞಿಯನ್ ಉೞಿಯದು, a calf does not leave the company of (its) mother. ಹಾಱೂರಿಗೆ ಉಳಿದವನೇ

ಗವುಡ, even he who has remained alive, is the chief officer of the ruined village.— ಪಱುಗೋಲೊಳ್ ಕುಳ್ಳಿರ್ದಂ, he sat down in the basket-boat. ಈ ಕಾನ್ತೆ ಚಿನ್ತೆಯೊಗುತೆ ಕುನ್ತು, ನೋಂಪಿಗಳಂ ಪಲವನ್ ಉಱೆ ನೋನ್ತು, ಬೇಸತ್ತಳ್, the wife sat in distress, performed several meritorious acts of devotion, and became dispirited (as these proved useless). ಈಚಲ ಮರದ ಕೆಳಗೆ ಕೂತು ಅಳೆ ಕುಡಿದ ಹಾಗೆ, as if (one) sits under a wild date tree and drinks buttermilk. ಗಣ್ಡಸು ಕೂತು ಕೆಟ್ಟನು, ಹೆಂಗಸು ತಿರುಗಿ ಕೆಟ್ಟಳು, the male sat (idly) and (thus) was ruined, the female roamed about and (thus) was ruined. ಈ ಬದುಕು ತಾವಿಬ್ಬರೇ ತಕ್ಕೊಳ್ಳ ಬೇಕೆನ್ದು ಹವಣಿಸಿ ಕೊಣ್ಡು ಕುಳಿತಿದ್ದರು, they thought that even both of them should take this property to themselves, and sat (there in the jungle).—ಓಡಿ ಓಡಿ ಹುಡುಗ ದಣಿದರೂ ತನ್ದೆಗೆ ಎಚ್ಚರವೇ ಇಲ್ಲ, though the boy ran and ran and became tired, (his) father did not care at all.—ಒಬ್ಬ ಸಿಪಾಯಿಯು ಕಾಳಗಕ್ಕೆ ಹೋಗ ಬೇಕೆನ್ದು ಒನ್ದು ಬಹು ಹದನಾದ ಕತ್ತಿ ಮಾಡಿಸಿದ್ದನು, a native soldier having said "I must go to war", had had a very sharp sword made.—ಅವನು ಹೋದ ಹೋದಲ್ಲಿ ಮಸೀದಿಗಳನ್ನು ಕೆಡಿಸಿದನು, wherever he went, he destroyed the mosques. ತನ್ನ ಕೆಡಿಸಿದಂಗೆ ಕೇಡ ಮಾಡುಹ, (one) causing ruin to the man who has ruined him.—ಕವಿತೆಯಂ ಪೇೞಿಸಿದಂ, he had a poetic composition told.—ಬತ್ತಲೆಯಿರ್ದವಳು, she who is naked. ಇದ್ದ ತಂಗಳು ನನಗೆ ಇಕ್ಕು, give me the stale-food (thou) hast.—ಕದ್ದ ಕಳ್ಳನ ಮಾತು ಬದ್ದಮ್ ಆದರೆ ಏನು, what is it, if a thief's word (once) become true?—ಅಣ್ಣ ತಮ್ಮನ್ದಿರಾದರೂ ಹಣ್ಣು ಹಂಚಿ ಉಣ್ಣುತ್ತಾರೆ, even brothers divide a ripe fruit and eat.—ಹೊಱೆಯ ಹೊತ್ತು ಬದುಕುವವನು, a man who lives by carrying loads. ಕತ್ತೆ ಬಲ್ಲುದೆ ಹೊತ್ತ ಕಸ್ತುರಿಯ ಪರಿಮಳವ, does a donkey know the fragrance of the musk it carries?—ಕರೆದರೆ ಉಣ್ಣು, if (one) invites (thee), eat. ಉಣ್ಣಲಿಕ್ಕೆ ಮನ್ದೀ ಕರೆಯ ಬೇಕು, (you) should invite people to dinner. ತನ್ನ ಆಳು ಕರೆದು, ಒನ್ದು ತಮ್ಬಿಗೆಯೊಳಗೆ ನೀರು ತುಮ್ಬಿ ಕೊಣ್ಡು ಬಾ ಎನ್ದು, ಹೇೞಿದಳು, she called her servant and said "fill water into a brass vessel and bring (it)".— ಭಾನುವಂ ಕೌಶಿಕವು ಕಾಣ್ಬುದೇ, does an owl see the sun?—ಚಿತ್ತವಿಟ್ಟು ಕೇಳುವದು, to apply the mind to and listen. ಕಾಲ್ಕುಪ್ಪಸವುನ್ ಇಟ್ಟು, ಸೀಸಕವುಂ ಸಿಂಗರಿಸಿ, having put on trowsers and embellished (their) helmets.—ಕನತ್ಕನಕಕವಚಮುಂ ತೊಟ್ಟು, ಕಾಲ್ಕುಪ್ಪಸಮುನ್ ಇಟ್ಟು, having invested themselves with shining golden coats of mail and put on trowsers. ತುಡಿಗೆಯುಂ ತೊಟ್ಟಂ, he put on (his) ornaments. ಪಸುರಂಗಿಯುಂ ತೊಟ್ಟನು, he put on a green coat.— ಮೃಗಂಗಳಂ ಹಿಡಿವ ಬಲೆ, a net with which wild animals are caught.—ಮೂಗಾವುದವುಂ ನಡೆದಂ, he walked three leagues. ಮನುಷ್ಯನು ಬದುಕಿ ಇರುವ ಮಟ್ಟಿಗೂ ಒಳ್ಳೇ ನಡತೆಯಿನ್ದ ನಡೆಯ ಬೇಕು, a person should walk very properly as long as he lives. ವಿದ್ಯೆ ಕಲಿತರೆ ಅವರು ನೀತಿಯಿನ್ದ ನಡೆಯುವರು, if (they) learn knowledge, they will walk properly. See an instance in this paragraph under 'to fear'.—ಮಣಿಯಗಾಱನಿಗೆ ದುಃಖ ಸುಖ ಹೇೞಿದರೆ ಮಣುವಿನ ಲೆಕ್ಕ ಬಿಟ್ಟಾನೇ, if (he) tells the maṇiyagâṟa (his) bad and good circumstances, will he not count the mounds? ತಾಯಿ, ನೀನಾದರೂ ಒನ್ದು ಹಂಚಿಕೆ ಹೇೞು ಎನ್ದು, ಬೇಡಿ ಕೊಣ್ಡಳು, she requested "mother, tell even you a means (to me)!"—ಕುರುಪತಿಯಂ ವಿಷ್ಣು ಬೇಡಿದಂ ಧರೆಯರೆಯುಂ, Vishṇu asked the half of the land of the lord of the Kurus. ಈ ಮುದುಕ ಬಿಕ್ಕೆ ಬೇಡಿ ಕಾೞು ತರುತ್ತಾನೆ, this old man solicits alms and (thus) brings grain (to his house).—ಕಿಸೆಯೊಳಗೆ ಕೈಯ್ ಹಾಕಿ ನೋಡಲು ರೊಕ್ಕವಿದ್ದಿಲ್ಲ, when (he) put (his) hand into (his) pocket and examined, (there) was no money.—ಕಾಳಗದ ಬಣ್ಣಿಯಂ

ಹತ್ತಿ ಹೊಡಹಂ, he who mounts a war-chariot and drives. ಕೋಟೆಯಂ ಪತ್ತುವೆಂ, I shall ascend the fort. ತೆಂಗಿನ ಮರ ಯಾಕೆ ಹತ್ತುತ್ತಿ, why doest thou ascend the cocoa-nut tree? ಕುದುರೆಯನ್ನು ಹತ್ತುವ ಸವಾರ, a horseman who mounts a horse. — ಅಲ್ಲಿಯ ಪೆಣ್ದಿರನ್ ಅಗ್ನಿ ಸುತ್ತಿದಂ, Agni surrounded the women of that place.

The terms that express 'to fear' generally appear without ಕೊಳ್, *e. g.* ಪಾಪಕ್ಕಂಜುಗುಂ ತಕ್ಕಂ, a worthy person fears sin. ಆ ಹುಡುಗನು ಅಂಜಿ, ತೋಳ ಬನ್ತಲೆ ತೋಳ ಬನ್ತು ಎನ್ದು, ಒದರಿದನು, the boy feared, and cried "the wolf has come, O the wolf has come!" ಕುದುರೆ ಕಡಿವಾಣಕ್ಕೆ ಅಳುಕುತ್ತದೆ, the horse is afraid of the bridle. ಆ ತೊತ್ತು ಹೆದರಿದಳು, that servant-maid was afraid. On the other hand there are also instances like the following one: — ದೇವರಿಗೆ ಅಂಜಿ ಕೊಣ್ಡು ಯಾವಾಗಲೂ ಒಳ್ಳೇ ರೀತಿಯಿನ್ದ ನಡೆದರೆ ಆತನು ನಮಗೆ ಸಹಾಯ ಮಾಡುವನು, if (we) fear God and always behave properly, He will help us. *Cf.* § 348, 6.

342. For the sake of emphasis ಉಣ್ಟು, is, is occasionally added to the end of a verb which appears in the form of a verbal noun, *e. g.* ಕೆಲವು ಗಿಡಗಳ ತೊಗಟೆಗಳಿನ್ದ ಸಹ ಕಾಗದ ಮಾಡುವದುಣ್ಟು, also of the bark of some trees (they) make paper. ಇರುಳು ಬೆಕ್ಕುಗಳಾಗಲಿ ಬೆಕ್ಕಿನ ಮರಿಗಳಾಗಲಿ ಸಿಕ್ಕಿದರೆ ಗೂಗೆಗಳು ಕಣ್ಣು ಕುಕ್ಕಿ ಅವುಗಳನ್ನು ಕೊಲ್ಲುವದುಣ್ಟು, if at night cats or young cats are met (by them), owls will peck (their) eyes and kill them. ಗುರುವಿನನ್ತೆ ಶಿಷ್ಯ ಎನ್ತ ಅನ್ನುವದುಣ್ಟು, (they) use to say "the pupil (is) like (his) spiritual teacher". ಹಿಂದುಸ್ಥಾನಕ್ಕೆ ಪರದೇಶಗಳಿನ್ದ ತರ ತರದ ಸರಕುಗಳು ಬರುವದುಣ್ಟು, various objects of commerce come from foreign countries to India. ಹಣ್ಡೆ ಈಯಿತೆಮ್ಬ ಮಾತು ಎನ್ದಾದರೂ ಸಮ್ಭವಿಸುವದುಂಟೊ, does it ever happen that a metal pot brings forth young? ಬ್ರಹ್ಮನು ಫಣೆಯಲ್ಲಿ ಬರದ ಬರಹ ತಪ್ಪುವದುಣ್ಟೇ, will the writing that Brahmâ has written on the forehead, fail?

XXV. On comparison.

343. In Kannaḍa the comparative and superlative degrees are expressed in the following way: —

1, **by the simple dative** (*cf.* § 348, 7), *e. g.*

a) ಲೋಕಕೀತನ್ ಅಧಿಕಂ, this man (is) excellent to the world, *i. e.* this man (is) most excellent in the world. ತಿಮಿಂಗಿಲಾದಿಗಳ್ ಅದೊನ್ದಕ್ಕೊನ್ದು ಪಿರಿದಪ್ಪ ಮೀನು, the timingila and so on are fishes of which the one is large to the one, *i. e.* of which one is larger than the other. ಒನ್ದಕ್ಕೊನ್ದು ಹಿರಿಯವಪ್ಪ ಮೀನು, fishes of which one is larger than the other.

b) ಮೇರುವೆಂಗೀತನ್ ಅಗ್ಗಳಂ, this man (is) great (or high) to Mêru, *i. e.* higher than Mêru. ಕುಲಕಂ ಚಲಕಂ ಭೂತಳದೊಳ್ ಒಗ್ಗವನ್ ಅಧಿಕಂ, superior to all in the world as to family and firmness of character (see § 284). ಸೊಲ್ಲಿಸಿ ಭೇದವನ್ ಅಱಿದೊಡೆ ಕಿಱಿಯು ತಾನ್ ಎಲ್ಲರಿಗೆ ಹಿರಿಯು, the small one, if (he) speaks discriminately, (is) great to all, *i. e.* (is) greater than all (or the greatest of all). ಕಾಗೆಗೆ ನೇಱಿಲ ಹಣ್ಣು ಕಪ್ಪು, the ripe fruit of the *Eugenia jambolana* (is) black to, *i. e.* blacker than, the crow. ನನ್ನ ಕುದುರೆಗೆ ನಿನ್ನ ಕುದುರೆ ದೊಡ್ಡದು, thy horse (is) larger than mine. (*Cf.* the second verse in § 280.)

c) ತನಗೆ ಇದಕ್ಕೂ ಬಹಳ ಬೆಲ್ಲ ಬೇಕೆನ್ದನು, he said he wanted much more jaggory than even this. ನಾಗರ ಹಾವಿನ ವಿಷವು ಎಲ್ಲಕ್ಕೂ ಕೆಟ್ಟದು, the poison of the cobra (is) the worst of all. ಗೋಧೀ ರೊಟ್ಟಿ ಎಲ್ಲಕ್ಕೂ ಮೇಲಾದದು, wheaten bread (is) the best of all.

2, **by the dative combined with** ಇನ್ದೆ, (ಇನ್ದ or) ಇನ್ತ (ಇನ್ತಾ), 'from' (ಇನ್ತ being another form of ಇನ್ದ, *cf.* § 282), suffixes of the ablative (or instrumental, see §§ 109 *seq.*; 352, 4, *a*), *e. g.*

a) ಕಱುಬರ್ ಇರ್ದೂರ್ಗಿನ್ದೆ ಕಾಡೊಳ್ಳಿತು, a jungle (is) good to-from a town in which (there) are envious people, *i. e.* a jungle (is) better than a town in which envious people are.

b) ಆಕಾಶಕ್ಕಿನ್ತ ಎತ್ತರವಿಲ್ಲ, ಭೂಮಿಗಿನ್ತ ಅಗಲವಿಲ್ಲ, (there) is no height to-from the sky, (there) is no breadth to-from the earth, *i. e.* (there) is nothing higher than the sky, (there) is nothing broader than the earth. ವಿದ್ಯಕ್ಕಿನ್ತ ಬುದ್ಧಿ ಶ್ರೇಷ್ಠ, ಬುದ್ಧಿಗಿನ್ತ ಅನ್ನ ಶ್ರೇಷ್ಠ, intellect (is) far better than science, food (is) far better than intellect. ವಿದ್ಯೆಯು ದ್ರವ್ಯಕ್ಕಿನ್ತ ದೊಡ್ಡದು, knowledge (is) greater than wealth. ತಾಮ್ರಕ್ಕಿನ್ತ ಬಂಗಾರವು ತುಟ್ಟಿ ಇರುತ್ತದೆ, gold is dearer than copper. ಸಿಂಹಕ್ಕಿನ್ತ ಹುಲಿಯು ಬಹಳ ಕ್ರೂರವು, the tiger (is) much fiercer than the lion. ಇದಕ್ಕಿನ್ತ ಅದು ರಮಣೀಯವಾದದ್ದು, that (is) more beautiful than this. ಏನು ಅಱಿಯದವ ಶ್ವಾನಕ್ಕಿನ್ತ ಕಡೆ, he who knows nothing (is) viler than a dog. ಇದಕ್ಕಿನ್ತ ಅದು ದೊಡ್ಡದು, that (is) larger than this. ಜ್ಞಾನಕ್ಕಿನ್ತ ಹೆಚ್ಚು ಇಷ್ಟವಾದದು ಯಾವದು, what (is) more dear than knowledge?

c) ತಾಯಿಗಿನ್ತ ಹಿತವರಿಲ್ಲ, ಸಕ್ಕರೆಗಿನ್ತ ಸವಿ ಇಲ್ಲ, (there) are none more beneficial than a mother, (there) is nothing sweeter than sugar. ಮಾನವಿಲ್ಲದ ಬಾಱ್ಬಿಕೆಗಿನ್ತ ಸಾವು ಲೇಸು, death (is) better than a life without honour. ಕತ್ತೆಯ ಕಿವಿ ಕುದುರೆಯ ಕಿವಿಗಿನ್ತ ಉದ್ದ, the ears of the donkey (are) longer than the ears of the horse. ಬಿಳೀ ಕರಡಿಗಳು ಊದೀ ಬಣ್ಣದ ಕರಡಿಗಳಿಗಿನ್ತ ದೊಡ್ಡ

ವಿರುತ್ತವೆ, white bears are bigger than bears of brown colour. ಅವನು ನನಗಿನ್ತ ನಾಲ್ಕು ವರ್ಷ ಚಿಕ್ಕವನು, he (is) four years younger than I. ಆ ಬಾವಿಗಿನ್ತ ಈ ಬಾವಿಯು ಆೞವಾಗಿರುತ್ತದೆ, this well is deeper than that well. ಆ ಹುಡಿಗಗಿನ್ತ ನಿಮ್ಮ ಹುಡಿಗಿಯು ಜಾಣೆ, your girl (is) more clever than that girl. ಕಬ್ಬಿಣವು ಮಿಕ್ಕ ಧಾತುಗಳಿಗಿನ್ತ ಬಹಳ ಉಪಯೋಗವುಳ್ಳದು, iron (is) much more useful than the other metals. ಆಲದ ಬೀಜವು ಕಸಕಸೀ ಕಾೞಿಗಿನ್ತ ಬಹು ಸಣ್ಣದು, the seed of the Banian tree (is) much smaller than poppy-seed. ಹೆಬ್ಬಾವುಗಳು ಉೞಿದ ಹಾವುಗಳಿಗಿನ್ತ ಬಹಳ ದೊಡ್ಡವು, boas (are) much larger than the other snakes. ಕೆಟ್ಟ ಹಾವಿಗಿನ್ತ ನಾಗರ ಹಾವಿಗೆ ಸಿಟ್ಟು ಬಹಳ, cobras have more wrath than the (so-called) vicious snakes. ನಾಯಿಗಳಿಗಿನ್ತ ತೋಳಗಳು ತುಸು ದೊಡ್ಡವು, wolves (are) a little larger than dogs. ಕುಱಿಯ ಹಾಲಿಗಿನ್ತಲೂ ಆಕಳ ಹಾಲಿಗಿನ್ತಲೂ ಆಡಿನ ಹಾಲು ಮನ್ದವಾಗಿ ಸವಿ ಇರುತ್ತದೆ, the milk of goats is thicker and sweeter than the milk of sheep and the milk of cows. ಪುತ್ತಳಿಗಿನ್ತ ಮೇಲುಬಂಗಾರವಿಲ್ಲ, ಮಕ್ಕಳಿಗಿನ್ತ ಮೇಲುತೊದಲಿಲ್ಲ, (there) is no gold better than pure gold, (there) is no lisping nicer than (that of) children. ಭೂಮಿಯ ಮೇಲಿನ ಎಲ್ಲ ಸುನ್ದರವಾದನ್ಥ ತೇಜವುಳ್ಳನ್ಥ ಒಡವೆಗಳಿಗಿನ್ತ ಮೇಲಾದ ಸುನ್ದರನೂ ತೇಜವುಳ್ಳವನೂ (ಸೂರ್ಯನಾದ) ನಾನೇ, of all the beautiful and brilliant things on earth even I (the sun, am) the most beautiful and brilliant. ತಮಗಿನ್ತ ಮೇಲಾದವರನ್ನು ಸರಿಗಟ್ಟಿ ಕೊಳ್ಳ ಬೇಕೆವ್ಬ ಒಣಹೆಮ್ಮೆ, the vain pride that wants to make equal to one's self those who are greater than one's self. ಕೆಲವು ಪಶುಗಳಿಗೆ ಇತರ ಪಶುಗಳಿಗಿನ್ತ ಹೆಚ್ಚು ಬುದ್ಧಿ ಇರುತ್ತದೆ, some animals have more understanding than other animals. ಮೂಱು ತಾಸುಗಳಿಗಿನ್ತ ಹೆಚ್ಚು, more than three hours. ನೂಱು ರೂಪಾಯಿಗಿನ್ತ ಕಡಿಮೆ, less than a hundred rupees. ಸಿಂಹಲದ್ವೀಪದಲ್ಲಿ ಮೞೆಗಾಲ ನಮ್ಮಲ್ಲಿಗಿನ್ತ ಹೆಚ್ಚು, the rainy season (is) more (abundant) in Ceylon than with us. ಗುಡ್ಡದೊಳಗಿನ್ದಲೂ ಕಲ್ಲ ದಾರಿಯಿನ್ದಲೂ ಒಜ್ಜೆ ಹೊತ್ತು ಕೊಣ್ಡು ಹೋಗ ಬೇಕಾದರೆ ಕುದುರೆಗಳಿಗಿನ್ತ ಕತ್ತೆಗಳೇ ಬೇಕು, if (it) is necessary to carry burdens over mountains and stony roads, donkeys are more desirable (or useful) than horses.

d) ಬಂಗಾರಕ್ಕಿನ್ತಲೂ ಜ್ಞಾನವು ಹೆಚ್ಚಿನದು, knowledge (is) something greater than even gold. ಎಲ್ಲರಿಗಿನ್ತಲೂ ದೇವರು ದೊಡ್ಡವನು, God (is) greater than all.[1]

3, **by the ablative and its substitute the instrumental** (§ 352, 4, *a*), *e. g.*

a) ಕೃಷ್ಣನತ್ತಣಿಂ ಬಲಭದ್ರಂ ಪಿರಿಯಂ, Balabhadra (is) old from Kṛishṇa,

---

[1] It is to be remarked that uneducated people occasionally use such sentences as ವಾಲೀ ಪಾಗೆ ಬಲವನ್ತನಿಲ್ಲ, ಹಾಲಿನಕ್ಕಿನ್ತ ಸವಿ ಇಲ್ಲ. ಮುಂಚಿನಕ್ಕಿನ್ತ ಚನ್ನಾಗಿ. ಅಯ್ನೂಱು ರೂಪಾಯಿಗಳಕ್ಕಿನ್ತ ಕಡಿಮೆ. ಕತ್ತೆಗಳು ದೊಡ್ಡ ಹೋತಿನಕಿನ್ತ ಸ್ವಲ್ಪ ಉದ್ದ ಇರುತ್ತವೆ. They evidently think that ಅಕ್ಕಿನ್ತ or ಅಕಿನ್ತ are separate suffixes which require the genitive case.

i. e. older than Kṛishṇa. ನಕುಲನತ್ತಣಿಂ ಸಹದೇವಂ ಕಿಱಿಯಂ, Sahadêva (is) younger than Nakula. ಅರ್ಜುನನತ್ತಣಿಂ ವಾಸುದೇವನ್ ಅಧಿಕಂ, Vâsudêva (is) more excellent than Arjuna. ಆತನತ್ತಣಿನ್ದೀತಂ ಪಟು, this man (is) more clever than that man. See § 349, 8.

b) ಕೃಷ್ಣನಿಂ ಪಿರಿಯಂ ಬಲಭದ್ರಂ, Balabhadra (is) old from Kṛishṇa, *i. e.* older than Kṛishṇa. ದುರ್ಯೋಧನನಿಂ ಕಿಱಿಯಳ್ ದುಶ್ಶಳೆ, Duššalĕ (is) younger than Duryôdhana. ಜ್ಞಾನವಿಲ್ಲದ ಕಾಯವು ಹಾೞೂರ ಸ್ಥಾನದಿಂ ಕಡೆಯು, a body without knowledge (is) even worse than a village in ruins. (*Cf.* the first verse in § 280.)

c) ಇನಿಯನೆ ಬೆಲ್ಲದಿನ್ದಿನಿಯಂ (—ಬೆಲ್ಲದಿನ್ದೆ ಇನಿಯಂ), a (or my) paramour (is) indeed a man sweet from jaggory, *i. e.* sweeter than jaggory. ರಣಕ್ಕೆನ್ನಿನ್ದೆ ನೀಂ ಮುಂಚಿದಯ್, thou art more excelling than I in respect of war (*i. e.* thou excellest me in war).

d) ಎಮ್ಮಿನ್ದಮ್ ಇಳೆಯೊಳು ನೀವು ಹೀನಮೆ, you (are) mean from us indeed, *i. e.* indeed meaner than we, on earth.

e) ಪೆಱರಿನ್ದ ಮೇಲೆಮ್ಬಂ, a man who says "I am better from others" *i. e.* "better than others". ದಾರಿದ್ರ್ಯದಿನ್ದ ಮರಣ ಒಳ್ಳೇದು, death (is) better than poverty. ಕಾಗೆಯಿನ್ದ ನೀಱಿಲ ಹಣ್ಣು ಕಪ್ಪು, the ripe fruit of the *Eugenia jambolana* (is) blacker than the crow. ತುಚ್ಛಮಾತು ಆಡುವವನು ಹುಚ್ಚನಿನ್ದ ಕಡೆ, a man who utters low words (is) worse than a fool.

f) ತನ್ನಿನ್ದವೂ ಹಿರಿಯನು, a male older from him, *i. e.* older than him (or an elder brother). ತನ್ನಿನ್ದಲೂ ಹಿರಿಯಳು, a female older than her (or an elder sister). (In these two instances the ವೂ and ಲೂ, 'also', 'even', appear to be redundant.)

4, by the locative (*cf.* § 350, 2), *e. g.*

a) ತನುಜರೊಳ್ ಚಿಕ್ಕವಂ, in (or among) sons the young one, *i. e.* the youngest son. ದೇವರೊಳ್ ನಿರ್ದೋಷಿಯಾಪ್ತಂ, the fit one among princes (is) the guiltless one, *i. e.* the guiltless one (is) the fittest of princes. ರತ್ನಂಗಳೊಳ್ ಮಾಣಿಕ್ಯಮ್ ಉತ್ತಮಂ, the ruby (is) the best of precious stones. ತುಱುಗಳೊಳ್ ಕಾರಾಕಳ್ ಪಾಲುಳ್ಳುದು, of cows the black cow has most milk. ವಸ್ತ್ರದೊಳ್ ಬೆಳ್ಪಟ್ಟೆಯೊಳ್ಳಿತ್ತು, white cloth (is) the best cloth. ಅವರೊಳ್ ಓಡುವಂ ಕಾಲ್ವೇಗಿ, he who runs (is) the quickest of them.

b) ಎಲ್ಲ ನಾಡುಗಳ ಕುದುರೆಗಳೊಳಗೆ ಅರಬಿಸ್ಥಾನದ ಕುದುರೆಗಳು ಮೇಲು, Arabian horses (are) the best horses of all countries.

c) ಆವುಗಳಲ್ಲಿ ಕಪಿಲೆ ಉತ್ತಮ, the brown cow (is) the best of cows. ಹುಡು

ಗರಲ್ಲಿ ರಾಮನು ಜಾಣನು, Râma (is) the most clever of the boys. ವಜ್ರವು ರತ್ನಗಳಲ್ಲಿ ಶ್ರೇಷ್ಠವಾದದ್ದು, the diamond (is) the most excellent of precious stones. ಸಿಂಹವು ಎಲ್ಲ ಶ್ವಾಪದಗಳಲ್ಲಿ ಬಲು ಭಯಂಕರವು ಇರುತ್ತದೆ, the lion (is) by far the most formidable of all wild beasts. ಎಲ್ಲ ವಸ್ತುಗಳಲ್ಲಿ ವಜ್ರವು ಕಠಿಣವಾದದ್ದು, the diamond (is) the hardest of all things. ಆ ಮನೆಯು ಎಲ್ಲ ಮನೆಗಳಲ್ಲಿ ಹಳೇದು, that house (is) the oldest of all houses.

